# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5028/2024 ಫ್ರಾಸಾ-11
ಚಾಸಾ-06

ದಿನಾಂಕಃ 16-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಾಮಕ್ಕ |
| **ತಂದೆಯ / ಗಂಡನ ಹೆಸರು** | ತಿಪ್ಪೆಸ್ವಾಮಿ |
| **ವಯಸ್ಸು** | 45 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ಮೆರವಾಯಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಮೃತ ರತ್ನಮ್ಮ ನನ್ನ ತಂಗಿಯಾಗಬೇಕು. ಸುಮಾರು 15-20 ವರ್ಷಗಳ ಹಿಂದೆ ರತ್ನಮ್ಮಳನ್ನು ಆರೋಪಿಯ ಜೊತೆ ನನ್ನ ತಂದೆ ತಾಯಿ ಮದುವೆ ಮಾಡಿಕೊಟ್ಟಿದ್ದರು. ಮದುವೆಯಾದ ನಂತರ ರತ್ನಮ್ಮ ತನ್ನ ಗಂಡನ ಜೊತೆ ದೇವರಬೆಟ್ಟ ಗ್ರಾಮದಲ್ಲಿ ವಾಸವಿದ್ದಳು. ಅವರ ಮನೆಯಲ್ಲಿ ಅತ್ತೆಯನ್ನು ಹೊರತುಪಡಿಸಿ ಎಲ್ಲರ ಜೊತೆ ವಾಸ ಮಾಡುತ್ತಿದ್ದಳು. ನನ್ನ ತಂಗಿಗೆ ಇಬ್ಬರು ಮಕ್ಕಳು ಇದ್ದು ಅವರುಗಳು ರಾಹುಲ್ ಮತ್ತು ಪ್ರಜ್ವಲ್. ಆರೋಪಿ ಕುಡಿದು ಬಂದು ಯಾವಾಗಲೂ ನನ್ನ ತಂಗಿ ಜೊತೆ ಗಲಾಟೆ ಮಾಡುತ್ತಿದ್ದ. ಕುಡಿಯಲು ಹಣ ಕೊಡು ಎಂದು ನನ್ನ ತಂಗಿಗೆ ಜೊತೆ ಜಗಳ ಮಾಡುತ್ತಿದ್ದ. ನನ್ನ ತಂಗಿ ಹಾಲಿನ ಡೈರಿಗೆ ಹೋಗಿ ಹಾಲಿನ ಕ್ಯಾನುಗಳನ್ನು ತೊಳೆಯುತ್ತಿದ್ದಳು , ನಂತರ ಹುಣಸೆ ಹಣ್ಣು ಹೊಡೆಯುವ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು ರಾತ್ರಿ 7-00 ಗಂಟೆಯಿಂದ ಹೂ ಕಟ್ಟುವ ಕೆಲಸ ಮಾಡುತ್ತಿದ್ದಳು ಇದರಿಂದ ಅವಳಿಗೆ ಆದಾಯ ಬರುತ್ತಿದ್ದು ಇದರಿಂದ ಸಂಸಾರ ನಡೆಸುತ್ತಿದ್ದಳು. ಆರೋಪಿ ಕೆಲಸ ಸಿಕ್ಕರೆ ಹೋಗುತ್ತಿದ್ದ ಕೆಲಸ ಸಿಗದೇ ಇದ್ದರೆ ಕುಡಿದು ಕೊಂಡು ಇರುತ್ತಿದ್ದ.

ಆರೋಪಿ ನನ್ನ ತಾಯಿಗೆ ಪೋನ್ ಮಾಡಿ ನನಗೆ ಕುಡಿಯಲು ಹಣ ಕೊಡು ಎಂದು ಕೇಳುತ್ತಿದ್ದ. ನನ್ನ ತಂಗಿ ನನಗೂ ಮತ್ತು ನನ್ನ ತಾಯಿಗೆ ಪೋನ್ ಮಾಡಿ ಆರೋಪಿ ಹಿಂಸೆ ಕೊಡುತ್ತಿದ್ದ ಬಗ್ಗೆ ನಮಗೆ ತಿಳಿಸಿರುತ್ತಾಳೆ. ನಾನು ಮತ್ತು ನನ್ನ ತಾಯಿ ಮೃತ ರತ್ನಮ್ಮನಿಗೆ ಆರೋಪಿ ಹಿಂಸೆ ಕೊಡುವುದಂರಿದ ನೀನು ನಮ್ಮ ಮನೆಗೆ ಬಂದು ಇರು ಆತನಿಗೆ ಬುದ್ದಿ ಬರುತ್ತದೆ ಎಂದು ಹೇಳಿದ್ದಳು. ಆದರೆ ನನ್ನ ತಂಗಿ ತನ್ನ ಗಂಡ ಎಷ್ಟೇ ಹೊಡೆದರೂ ಬಡಿದರುಾ ನಾನು ಬರುವುದಿಲ್ಲ ನನ್ನ ಮಕ್ಕಳಿಗೆ ಒಳ್ಳೆ ವಿದ್ಯಾಭ್ಯಾಸ ಕೊಡಿಸಬೇಕು ಪ್ರಾಣ ಹೊದರೂ ನಾನು ಬರುವುದಿಲ್ಲ ಎಂದು ಹೇಳಿದ್ದಳು. ನನ್ನ ತಂಗಿ ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೂ , ಜನ್ಮ ದಿನ ಆಚರಣೆ ಮಾಡುವುದಕ್ಕೆ, ಬಟ್ಟೆ ಮತ್ತು ಚಪ್ಪಲಿಗೆ ನನ್ನ ತಮ್ಮ ಹಣ ಕಳುಹಿಸುತ್ತಿದ್ದ. ನಾನು ಯಾವತ್ತಾದರೂ ಆರೋಪಿ ಮನೆಗೆ ಹೋದರೆ ನನಗೆ ಕೆಟ್ಟ ಮಾತುಗಳಿಂದ ಬೈದು ಹೊಡೆದು ಕಳುಹಿಸುತ್ತಿದ್ದ.

ಸುಮಾರು 2 ವರ್ಷ 3 ತಿಂಗಳ ಹಿಂದೆ ನಾನು ಮನೆಯಲ್ಲಿದ್ದಾಗ ಆರೋಪಿ ಪೋನ್ ಮಾಡಿ ರತ್ನಮ್ಮನಿಗೆ ಮೂರ್ಛೆ ರೋಗ ಬರುತ್ತಿದೆ 5-6 ಜನ ಎತ್ತಿದರೂ ಆಗುತ್ತಿಲ್ಲ ಆಂಬುಲೆಯನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇವೆ ನೀವು ಬನ್ನಿ ಎಂದು ಹೇಳಿರುತ್ತಾನೆ. ನಂತರ ನಾವು ಆಟೋದಲ್ಲಿ ಮಧುಗಿರಿಗೆ ಬಂದಿರುತ್ತೇವೆ. ನಮಗೆ ಯಾರೂ ನನ್ನ ತಂಗಿಯ ಪ್ರಾಣ ಹೋಗಿರುವುದು ಹೇಳಿರುವುದಿಲ್ಲ ನಾವು ಊರಿಗೆ ಹೋಗಿರುತ್ತೇವೆ. ಪಾವಗಡ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ನಾನು ಶವವನ್ನು ನೋಡಿರುತ್ತೇನೆ, ಶವವನ್ನು ನೋಡಿದಾಗ ಬಲ ಕಿವಿಯಲ್ಲಿ ರಕ್ತ ಬರುತ್ತಿತ್ತು, ಹೊಡೆದಿರುವ ರಬಸಕ್ಕೆ ಕಿವಿಯ ಓಲೆ ಪಚ್ಚಿ ಆಗಿತ್ತು. ಆರೋಪಿಗೆ ಕುಡಿಯಲು ಹಣ ಕೊಡದೇ ಇದುದ್ದರಿಂದಲೇ ನನ್ನ ತಂಗಿಗೆ ಹೊಡೆದು ಸಾಯಿಸಿರುತ್ತಾನೆ. ನನ್ನ ತಂಗಿಯ ಸಾವಿಗೆ ಆರೋಪಿಯೇ ಕಾರಣ. ನನ್ನ ತಂಗಿಯ ಮಗನನ್ನು ವಿಚಾರ ಮಾಡಿದಾಗ ಅವನು ನನ್ನ ತಂದೆ ನನ್ನ ತಾಯಿಯನ್ನು ಹೊಡೆಯುತ್ತಿದ್ದ ನಾನು ಆ ಸಮಯದಲ್ಲಿ ಅಲ್ಲಿಗೆ ಹೊಗಿದ್ದಕ್ಕೆ ನನ್ನ ತಂದೆ ಇಲ್ಲಿಂದ ಹೋಗು ಎಂದು ಹೇಳಿದ್ದರಿಂದ ನಾನು ಆಚೆ ಹೋಗಿರುತ್ತೇನೆ ಎಂದು ತಿಳಿಸಿದ, ಆರೋಪಿಯ ಹತ್ತಿರವೇ ಎರಡು ಮಕ್ಕಳು ಇರುತ್ತಾರೆ. ಮೇಲೆ ಹೇಳಿದ ಸಂಗತಿಗಳನ್ನು ಬಿಟ್ಟರೆ ಬೇರೆ ಏನೂ ಪೊಲೀಸರ ಮುಂದೆ ಹೇಳಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 05.04.2024 ರಂದು ನಾನು ದೇವರಬಟ್ಟೆ ಗ್ರಾಮದಕ್ಕೆ ಬಂದು ಮೃತ ರತ್ನಮ್ಮಳ ಮಗನಾದ ರಾಮುವನ್ನು ವಿಚಾರಿಸಿದಾಗ ಆತನು ದಿ. 04.004.2024 ರಂದು 4-30 ಗಂಟೆಗೆ ಆರೋಪಿ ಮೃತ ರತ್ನಮ್ಮಳನ್ನು ಮದ್ಯ ಸೇವನೆ ಮಾಡಲು 50/- ರೂ ಹಣ ಕೇಳಿದಾಗ ಅವಳು ಕೊಡದೇ ಇದುದ್ದರಿಂದ ರತ್ನಮ್ಮಳ ಜೊತೆ ಜಗಳ ತೆಗೆದು ಮಾನಸಿಕ ಮತ್ತು ದೈಹಿಂಕವಾಗಿ ಹಿಂಸೆ ಕೊಟ್ಟು ನೇಣು ಹಾಕಿಕೊಳ್ಳಲು ಪ್ರಚೋದನೆ ನೀಡಿದ್ದರಿಂದಲೇ ಅದೇ ದಿನ ರತ್ನಮ್ಮ ಸೀರೆಯಿಂದ ನೇಣು ಹಾಕಿಕೊಂಡಾಗ ಅಕ್ಕ ಪಕ್ಕದವರ ಮನೆಯವರು ಬಂದು ನೇಣು ಕುಣಿಕೆಯಿಂದ ಇಳಿಸಿ ಆಸ್ಪತ್ರೆಗೆ ಸಾಗಿಸಿರುತ್ತಾರೆಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ರತ್ನಮ್ಮ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾಳೆಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪಾವಗಡ ಸರ್ಕಾರಿ ಆಸ್ಪತ್ರೆಯಿಂದ ತುಮಕೂರು ಜಿಲ್ಲಾ ಆಸ್ಪತ್ರೆ ಗೆ ಹೋಗುವ ಮಾರ್ಗ ಮದ್ಯ ಮೃತಪಟ್ಟಿರುತ್ತಾಳೆಂದು ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ, ಸದರಿ ಹೇಳಿಕೆ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ನ್ಯಾಯಾಲಯದ ಸಮಯವಾಗಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**ಸಾಕ್ಷಿ ತೆಲುಗಿನಲ್ಲಿ ಸಾಕ್ಷಿ ನುಡಿದಿದ್ದು ಅದನ್ನು ಕೆ.ವಿ.ಎಸ್.ಎಸ್. ವಕೀಲರು ಕನ್ನಡಕ್ಕೆ ಭಾಷ್ಯಾಂತರ ಮಾಡಿರುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**